ಕೋಲ್ಕತ್ತದ **ಚಿತ್ರಾ ಲಹರಿ** ಕವಿ, ಕಥೆಗಾರ್ತಿ. ಕೇಂದ್ರ ಸಾಹಿತ್ಯ ಅಕಾಡೆಮಿಯ ಬಂಗಾಳಿ ವಿಭಾಗದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದವರು. ‘ತೊಮಾರ್ ಮನ್ ನೆಇ ಕುಸುಮ್’, ‘ವ್ಯಕ್ತಿಗತ ಭಾಷಾಗತ’, ‘ಕಥಾ ಕಾಹಿನಿ’ ಮುಂತಾದವು ಅವರ ಪ್ರಮುಖ ಕೃತಿಗಳು.

ಆವಾಗ ಜಯಾದಿ ಗರ್ಭಿಣಿಯಲ್ವಾ, ಮೂರು ತಿಂಗಳಾಗಿತ್ತು. ಅದಕ್ಕೆ ಹೆಂಡತಿಯನ್ನು ನೋಡಿಕೊಳ್ಳಲು ಸುದೀಪ್ತದಾ ಹೋಗಿ ಅಕ್ಕನನ್ನು ಕರೆದುಕೊಂಡು ಬಂದಿದ್ದರು.

ಮೊದಲಿಗೆ ಮಾಧವಿಲತಾರನ್ನು ನೋಡಿದ್ದಕ್ಕೂ ಇವತ್ತಿಗೂ ಎಂಟು ವರ್ಷ ಆಗಿರಬೇಕು. ಅದಕ್ಕೂ ಎರಡು ವರ್ಷ ಮೊದಲೇ ಸೋಮೇನ್ ಡಂಡಂ ಪಾರ್ಕಿನ ಹತ್ತಿರ ಜಾಗ ತಗೊಂಡು ಈ ಮನೆ ಕಟ್ಟಿಸಿದ್ದ, ನಂತರ ರಿಯಾಳನ್ನು ಕರೆದುಕೊಂಡು ಇಲ್ಲಿಗೆ ವಾಸಕ್ಕೆ ಬಂದಿದ್ದ. ಎರಡು ಮಹಡಿಯ ಮನೆಯಲ್ಲಿ ತಳ ಮಹಡಿಯನ್ನು ಬಾಡಿಗೆಗೆ ಬಿಟ್ಟು, ಮೊದಲನೆ ಮಹಡಿಯಲ್ಲಿ ಅವರಿದ್ದರು. ಸೋಮೇನ್ ಕೆಲಸಕ್ಕೆ ಹೋದಾಗ ಮನೆಯಲ್ಲಿ ಅವಳು ಒಬ್ಬಳೇ. ರಿಕ್ಷಾದ ಗಂಟೆ ಕೇಳಿ ರಿಯಾ ನೆನಪಿನಿಂದ ಎಚ್ಚೆತ್ತಳು. ಮಾಧವಿದಿನ ಕರೆದುಕೊಂಡು ಸುದೀಪ್ತದಾ ಬಸ್ ಸ್ಟ್ಯಾಂಡ್‌ಗೆ ಹೋಗಲು ರಿಕ್ಷಾ ಹತ್ತಿದರು. ಹೌರಾ ಸ್ಟೇಷನ್ನಿಂದ ಕಾಶಿಗೆ ಹೋಗುವ ಡೂನ್ ಎಕ್ಸ್‌ಪ್ರೆಸ್ ಹತ್ತಿಸಿ ಸುದೀಪ್ತ ವಾಪಾಸಾಗ್ತಾನೆ ಅಂತ ಬೆಳಿಗ್ಗೆ ಮಾಧವಿದಿ ಹೇಳಿದ್ದರು.

* * *

ಮಾಧವಿದಿ ಕಾಶಿಯಿಂದ ಬರುವ ಎರಡು ವರ್ಷ ಮೊದಲೇ ಕೆಳಗಿನ ಮನೆಗೆ ಸುದೀಪ್ತ ಜಯಾ ಬಾಡಿಗೆಗೆ ಬಂದಿದ್ದರು. ಅವರಿಗೆ ಮದುವೆಯಾಗಿ ಕೆಲವು ತಿಂಗಳುಗಳಷ್ಟೇ ಆಗಿದ್ದವು. ಇಬ್ಬರಿಗೂ ಸ್ವಲ್ಪ ತಡವಾದ ಮದುವೆ, ಒಂದೇ ಆಫೀಸಿನಲ್ಲಿ ಕೆಲಸ ಮಾಡ್ತಿದ್ದರು. ಆದರೆ, ಆಫೀಸಿನಲ್ಲಿ ಜಯಾ ಸುದೀಪ್ತನಿಗಿಂತ ಸ್ವಲ್ಪ ಸೀನಿಯರ್. ಮದುವೆಯನ್ನು ಸ್ವತಃ ಮಾಧವಿಲತಾನೆ ನಿಂತು ನಡೆಸಿಕೊಟ್ಟಿದ್ದರು ಮತ್ತು ಮದುವೆಯಾದ ಎರಡು ತಿಂಗಳಿಗೇ ಮತ್ತೆ ಕಾಶಿಗೆ ಹಿಂತಿರುಗಿದ್ದರು. ಅಲ್ಲಿ ಅವರಿಗೆ ಕೇದಾರನಾಥ್ ಘಾಟ್ ಹತ್ತಿರ ಒಂದು ಮಂದಿರಕ್ಕೆ ಹೊಂದಿಕೊಂಡ ಸಣ್ಣ ಜಾಗವಿತ್ತು. ಮಾಧವಿಲತಾ ಕಾಶಿಗೆ ಹಿಂದಿರುಗಿದ ಕೂಡಲೇ ಸುದೀಪ್ತ ಮತ್ತು ಜಯಾ, ರಿಯಾರ ಈ ಮನೆಗೆ ಬಾಡಿಗೆಗೆ ಬಂದಿದ್ದರು. ಅದಕ್ಕಿಂತ ಮುಂಚೆ ಅವರು ಹೂಗ್ಲಿ ನದಿ ದಂಡೆಯ ಹತ್ತಿರ ಚಂದನ್ ನಗರದಲ್ಲಿ ಬಾಡಿಗೆಗಿದ್ದರು. ಅಲ್ಲಿಂದ ಟ್ರೇನಿನಲ್ಲಿ ಆಫೀಸಿಗೆ ಓಡಾಡೋದು ಕಷ್ಟ ಅಂತ ಇಲ್ಲಿಗೆ ಬಂದಿದ್ದರು. ಈಗಂತೂ ಚಂದನ್ ನಗರದಲ್ಲಿದ್ದ ಅವರ ಸ್ವಂತ ಮನೆ ಇರಲಿಲ್ಲ. ಅದು ಅವರ ಬಾಬಾ ಸತ್ತ ಮೇಲೆ, ಬಹಳ ಹಿಂದೇನೆ ಮಾರಾಟವಾಗಿ ಹೋಗಿತ್ತು.

ಈ ಎಲ್ಲಾ ಕಥೆಯನ್ನು ರಿಯಾ, ಜಯಾದಿ ಬಾಯಿಂದ ಕೇಳಿದ್ದಳು. ಮಧ್ಯೆಮಧ್ಯೆ ಆಫೀಸಿಂದ ಬಂದ ಮೇಲೆ ಜಯಾ ಸ್ವಲ್ಪ ಹೊತ್ತು ವಿಶ್ರಮಿಸಿ, ರಿಯಾಳ ಮನೆಗೆ ಬರುತ್ತಿದ್ದರು. ರಿಯಾಗೂ ಇಷ್ಟ, ಅವರ ಜೊತೆ ಮಾತಾಡೋಕೆ. ಆಗ ಮೊದಲ ಬಾರಿಗೆ ಮಾಧವಿಲತಾರ ಬಗ್ಗೆ ರಿಯಾ ಕೇಳಿದ್ದಳು. ಚಂದನ್ ನಗರದ, ಒಂದು ಕಾಲದಲ್ಲಿ ಬಹಳ ಪ್ರಸಿದ್ಧ ವಕೀಲರಾಗಿದ್ದ ಅಭಯಪದ ಮುಖರ್ಜಿ, ಅವರ ಪತ್ನಿ ಅಮಿಯಲತಾದೇವಿಯವರ ಇಬ್ಬರು ಮಕ್ಕಳಲ್ಲಿ ದೊಡ್ಡವಳು ಮಾಧವಿಲತಾ, ಎರಡನೆಯವನು ಮಗ ಸುದೀಪ್ತ. ಮಾಧವಿಲತಾ ಹದಿನೈದು ವರ್ಷದವಳಿದ್ದಾಗ ಅವಳನ್ನು ವರ್ಧಮಾನ ಜಿಲ್ಲೆಯ ಒಂದು ಹಳ್ಳಿಯ ಶ್ರೀಮಂತ ಕುಟುಂಬಕ್ಕೆ ಮದುವೆ ಮಾಡಿಕೊಟ್ಟಿದ್ದರು. ಹೊಲಮನೆ, ಗದ್ದೆತೋಟ ಅಂತ ಬಹಳ ಆಸ್ತಿ ಇದ್ದ ಕುಟುಂಬ. ಮಾಧವಿಲತಾರ ಪತಿ ಪ್ರಶಾಂತ ವರ್ಧಮಾನ ಪಟ್ಟಣದ ಪ್ರೌಢಶಾಲೆಯಲ್ಲಿ ಇತಿಹಾಸದ ಮೇಷ್ಟ್ರಾಗಿದ್ದರು. ದಿಢೀರನೆ ಏನಾಯಿತೋ, ಎರಡು ದಿನ ಜ್ವರ ಬಂದು ಪ್ರಶಾಂತ ತೀರಿಕೊಂಡರು. ವರ್ಷ ತುಂಬುವುದರೊಳಗೆ ವಿಧವೆಯಾಗಿ ಮಾಧವಿಲತಾ ಚಂದನ್ ನಗರದ ತವರಿಗೆ ಮರಳಿದರು. ಅವರಿಗೆ ಅತ್ತೆ ಮನೆಯಲ್ಲೇ ಇರೋಕೆ ಇಷ್ಟ ಇತ್ತು, ಆದರೆ ಅತ್ತೆಮಾವ ಇಟ್ಟುಕೊಳ್ಳಲಿಲ್ಲ. ಅದಕ್ಕೆ ಕಾರಣವೂ ಇತ್ತು. ಪ್ರಶಾಂತನಿಗೆ ಇನ್ನಿಬ್ಬರು ತಮ್ಮಂದಿರಿದ್ದರು. ಅವರಲ್ಲಿ ಒಬ್ಬ ಕೋರ್ಟ್‌ನಲ್ಲಿ ಕೆಲಸ ಮಾಡುತ್ತಿದ್ದ ಮತ್ತೊಬ್ಬ ಕಾಲೇಜಲ್ಲಿ ಓದುತ್ತಿದ್ದ. ಹರೆಯದ ವಿಧವೆ ಹೆಣ್ಣನ್ನು ಮನೆಯಲ್ಲಿಟ್ಟುಕೊಳ್ಳಲು